# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/346/13-14 ದಿನಾಂಕ : 19-07-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಪಿ. ಕೃಷ್ಣಮೂರ್ತಿ ತಂದೆ ಪಿ. ಹನುಮಂತಪ್ಪ, ಕೊಂಚಿಗೇರಿ ಗ್ರಾಮ, ಸಿರುಗುಪ್ಪ ತಾಲ್ಲೂಕು<br>(ಶ್ರೀ ಪಿ. ಹೆಚ್. ಮಂಜುನಾಥ, ವಕೀಲರು, ಬಳ್ಳಾರಿ) | (1) ತಹಶೀಲ್ದಾರರು, ಸಿರುಗುಪ್ಪ<br>(2) ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಕೊಂಚಿಗೇರಿ | 247/B3 ಪೈಕಿ, 247/A3 ಪೈಕಿ, 249/A ಪೈಕಿ, 119 ಪೈಕಿ, 46 ಪೈಕಿ | ಕ್ರಮವಾಗಿ 1.24, 0.66, 1.57, 9.97, 2.13 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ ಇವರ ಎಂ ಆರ್ ನಂ 66/11-12 ದಿನಾಂಕ 28/12/2011 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 25-08-2015, 06-10-2015, 05-01-2016, 07-06-2016, ಮತ್ತು 19-07-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಮತ್ತು ಅವರ ವಕೀಲರು ದಿನಾಂಕ: 19-07-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಸಿರುಗುಪ್ಪ ತಾಲ್ಲೂಕಿನ ಕೊಂಚಿಗೇರಿ ಗ್ರಾಮದ ಸ.ನಂ 247/B3 ಪೈಕಿ, 247/A3 ಪೈಕಿ, 249/A ಪೈಕಿ, 119 ಪೈಕಿ, 46 ಪೈಕಿ ವಿಸ್ತೀರ್ಣ: ಕ್ರಮವಾಗಿ 1.24, 0.66, 1.57, 9.97, 2.13 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ ಇವರ ಎಂ ಆರ್ ನಂ 66/11-12 ದಿನಾಂಕ 28/12/2011 ರ ಆದೇಶದಲ್ಲಿ ವಾದಿಯ ತಂದೆಯ ಹೆಸರು ಪಿ.ಹನುಮಂತಪ್ಪ ಬದಲಾಗಿ ವೆಂಕೋಬಣ್ಣ ಎಂದು ತಪ್ಪಾಗಿ ನಮೂದಾಗಿರುವುದನ್ನು ಸರಿಪಡಿಸಿ ಕೊಡುವಂತೆ ಮನವಿ ಮಾಡಿರುತ್ತಾರೆ. ಪ್ರಕರಣವನ್ನು ಲಭ್ಯ ದಾಖಲೆಗಳನ್ವಯ ಪರಿಶೀಲಿಸಲಾಗಿ ಸದರಿ ಹಕ್ಕು ಬದಲಾವಣೆಯು ನೋಂದಾಯಿತವಲ್ಲದ ಪಾಲು ಪತ್ರದ ಮುಖಾಂತರವಾಗಿದ್ದು, ಈ ಪಾಲು ಪತ್ರದಲ್ಲಿಯೇ ವಾದಿಯ ತಂದೆಯ ಹೆಸರು ವೆಂಕೋಬಣ್ಣ ಎಂದು ತಪ್ಪಾಗಿ ನಮೂದಾಗಿದ್ದು, ಈ ಪಾಲು ಪತ್ರದಂತೆಯೇ ಹಕ್ಕುಬದಲಾವಣೆ ಅನುಮೋದನೆಯಾಗಿ ಪಹಣಿಯಲ್ಲಿ ವಾದಿಯ ತಂದೆಯ ಹೆಸರು ವೆಂಕೋಬಣ್ಣ ಎಂದು ನಮೂದಾಗಿರುತ್ತದೆ.

ಮುಂದುವರೆದು ವಾದಿಯು ಸಲ್ಲಿಸಿದ ಪ್ರಮಾಣ ಪತ್ರ, ಕುಟುಂಬ ಪಡಿತರಚೀಟಿ ಮತ್ತು ವಂಶವೃಕ್ಷ ವನ್ನು ಪರಿಶೀಲಿಸಲಾಗಿ ವಾದಿಯ ತಂದೆಯ ಹೆಸರು ಹನುಮಂತಪ್ಪ ಎಂದು ಕಂಡುಬಂದಿರುತ್ತದೆ. ಕಾರಣ ಸದರಿ ವಿವಾದಾಸ್ಪದ ಜಮೀನಿಗೆ ಈ ಕೆಳಕಂಡಂತೆ ಆದೇಶ .

ಮುಂದಿನ ಪುಟಕ್ಕೆ.....

:: ಆದೇಶ ::

ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಕೊಂಚಿಗೇರಿ ಗ್ರಾಮದ ಸ.ನಂ 247/B3 ಪೈಕಿ, 247/A3 ಪೈಕಿ, 249/A ಪೈಕಿ, 119 ಪೈಕಿ, 46 ಪೈಕಿ ವಿಸ್ತೀರ್ಣ: ಕ್ರಮವಾಗಿ 1.24, 0.66, 1.57, 9.97, 2.13 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಎಂ ಆರ್ ನಂ 66/2011-12 ದಿನಾಂಕ 28-12-2011 ರನ್ನು ಅಂಗೀಕರಿಸುವಾಗ ತಪ್ಪುಗಳಾಗಿದ್ದು, ಮೇಲ್ಮನವಿ ದಾರರು ಈ ಮೇಲ್ಮನವಿಯನ್ನು ಕಂದಾಯ/ಪೋಡಿ ಅದಾಲತ್ ನಲ್ಲಿ ಸೂಕ್ತದಾಖಲೆಗಳೊಂದಿಗೆ ಮಂಡಿಸಲು, ತಹಶೀಲ್ದಾರರು ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ:19-07-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ

ಸಹಾಯಕ ಆಯುಕ್ತರು
ಬಳ್ಳಾರಿ.